## ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು** : **ಶ್ರೀ ಡಿ ಟಿ ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು)**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : **265**

**ಉತ್ತರಿಸಬೇಕಾದ ದಿನಾಂಕ** : **18-08-2026**

**ಉತ್ತರಿಸಬೇಕಾದ ಸಚಿವರು** : **ಮಾನ್ಯ ಸಹಕಾರ ಸಚಿವರು**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ (PACS) ಸಂಖ್ಯೆ ಎಷ್ಟು; ಕಳೆದ ಮೂರು ವರ್ಷಗಳಲ್ಲಿ ಎಷ್ಟು ಹೊಸ ಸಂಘಗಳಿಗೆ ನೋಂದಣಿ ನೀಡಲಾಗಿದೆ; | ರಾಜ್ಯದಲ್ಲಿ ಒಟ್ಟು 6091 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿವೆ. ಕಳೆದ ಮೂರು ವರ್ಷಗಳಲ್ಲಿ ಹೊಸದಾಗಿ 294 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ನೋಂದಣಿಯಾಗಿವೆ. |
| ಆ) | ಸಹಕಾರ ಬ್ಯಾಂಕುಗಳಲ್ಲಿ ರೈತರಿಗೆ ನೀಡಲಾಗಿರುವ ಬೆಳೆ ಸಾಲದ ಒಟ್ಟು ಮೊತ್ತ ಎಷ್ಟು; (ಜಿಲ್ಲಾವಾರು ವಿವರ ನೀಡುವುದು); | 21 ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಮೂಲಕ ರೈತರು ಬೆಳೆ ಸಾಲ ಪಡೆದಿದ್ದು, ದಿನಾಂಕ:31-07-2026 ಕ್ಕೆ ಇದ್ದಂತೆ 30,01,169 ರೈತರಿಂದ ರೂ.25,180.77 ಕೋಟಿ ಮೊತ್ತದ ಬೆಳೆ ಸಾಲ ಹೊರಬಾಕಿ ಇರುತ್ತದೆ. ವಿವರವನ್ನು **ಅನುಬಂಧದಲ್ಲಿ** ನೀಡಲಾಗಿದೆ. |
| ಇ) | ಕಳೆದ ಮೂರು ವರ್ಷಗಳಲ್ಲಿ ಸಹಕಾರ ಸಂಘಗಳಲ್ಲಿ ನಡೆದಿರುವ ಹಣಕಾಸಿನ ಅಕ್ರಮಗಳ ಕುರಿತು ಎಷ್ಟು ಪ್ರಕರಣಗಳು ದಾಖಲಾಗಿವೆ; | ಕಳೆದ ಮೂರು ವರ್ಷಗಳ ಅವಧಿಯಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ 139 ಪ್ರಕರಣಗಳು ದಾಖಲಾಗಿರುತ್ತವೆ. |
| ಈ) | ರಾಜ್ಯದ ಸಹಕಾರ ಸಂಘಗಳ ಲೆಕ್ಕಪರಿಶೋಧನೆ (Audit) ಬಾಕಿ ಇರುವ ಸಂಘಗಳ ಸಂಖ್ಯೆ ಎಷ್ಟು; ಅವುಗಳನ್ನು ಪೂರ್ಣಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; | 2025-26ನೇ ಸಾಲಿಗೆ ಸಂಬಂಧಿಸಿದಂತೆ ದಿನಾಂಕ: 31-07-2026 ಕ್ಕೆ ಇದ್ದಂತೆ 4313 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಲೆಕ್ಕಪರಿಶೋಧನೆ ಬಾಕಿ ಇರುತ್ತದೆ. ಲೆಕ್ಕಪರಿಶೋಧನೆ ಬಾಕಿ ಇರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಲೆಕ್ಕಪರಿಶೋಧನೆ ಪೂರ್ಣಗೊಳಿಸಲು ಈ ಕೆಳಗಿನಂತೆ ಕ್ರಮವಿಡಲಾಗಿದೆ.<br><br>• ಸಹಕಾರ ಸಂಘಗಳ ವಾರ್ಷಿಕ ಮಹಾಸಭೆಗಳಲ್ಲಿ ಪ್ರತಿ ವರ್ಷ ಲೆಕ್ಕಪರಿಶೋಧಕರನ್ನು ನೇಮಕಾತಿ ಮಾಡಿಕೊಳ್ಳಲು ಅವಕಾಶವಿದ್ದು, ನೇಮಕಾತಿ ಮಾಡಿಕೊಳ್ಳದ ಸಹಕಾರ ಸಂಘಗಳಿಗೆ ಲೆಕ್ಕ ಪರಿಶೋಧನಾ ಇಲಾಖೆಯಿಂದ ಲೆಕ್ಕಪರಿಶೋಧಕರನ್ನು ನೇಮಿಸಲಾಗುತ್ತದೆ. ಈ ರೀತಿಯಾಗಿ ಲೆಕ್ಕ ಪರಿಶೋಧನೆ ಪೂರ್ಣಗೊಳಿಸುವ |

| | | |
|---|---|---|
| | | ನಿಟ್ಟಿನಲ್ಲಿ ಆಡಿಟ್ ಆಗದೇ ಇರುವ ಸಹಕಾರ ಸಂಘಗಳಿಗೆ ಲೆಕ್ಕಪರಿಶೋಧನಾ ಇಲಾಖೆಯಿಂದ ನೋಟೀಸು ನೀಡುತ್ತಾ ಹಿಂಬಾಲಿಕಾ ಕ್ರಮವಿಡಲಾಗುತ್ತಿದೆ. |
| ಊ) | ಸಹಕಾರ ಸಂಘಗಳ ಚುನಾವಣೆಗಳನ್ನು ನಿಗದಿತ ಅವಧಿಯಲ್ಲಿ ನಡೆಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | 1) ಸಹಕಾರ ಸಂಘಗಳ ಚುನಾವಣೆಗಳನ್ನು ಸರ್ಕಾರದ ಆಡಳಿತಾತ್ಮಕ ಹಸ್ತಕ್ಷೇಪವಿಲ್ಲದೆ ನಡೆಸಲು ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಪ್ರಾಧಿಕಾರ (Co-operative Election Authority-KSCEA) ವನ್ನು ಸ್ಥಾಪಿಸಲಾಗಿದೆ. ಪ್ರಾಧಿಕಾರದಿಂದ ಕಾರ್ಯವ್ಯಾಪ್ತಿಗೆ ಅನುಗುಣವಾಗಿ ಚುನಾವಣೆ ನಡೆಸಲು ಚುನಾವಣಾಧಿಕಾರಿಗಳನ್ನು ನೇಮಕ ಮಾಡಿ ಆದೇಶ ಹೊರಡಿಸಲಾಗಿರುತ್ತದೆ.<br><br>2) ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಮತ್ತು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ನಿಯಮ 13-ಬಿಬಿ ರಂತೆ ಸಹಕಾರ ಸಂಘ/ಬ್ಯಾಂಕುಗಳಿಗೆ ಚುನಾವಣೆಯನ್ನು ನಡೆಸುವ ಸಂಬಂಧ ಪ್ರತಿ ವರ್ಷ ಸಹಕಾರ ಚುನಾವಣಾ ಪ್ರಾಧಿಕಾರವು ಚುನಾವಣಾಧಿಕಾರಿಗಳನ್ನು ನೇಮಕಾತಿ ಮಾಡಿ ಆದೇಶ ಹೊರಡಿಸುತ್ತಿದ್ದು, ಸದರಿ ಚುನಾವಣಾಧಿಕಾರಿಗಳು ಸಂಘದ ಆಡಳಿತ ಮಂಡಳಿ ಅವಧಿ ಮುಗಿಯುವ ಸಹಕಾರ ಸಂಘಗಳಿಗೆ ರಿಟರ್ನಿಂಗ್ ಆಫೀಸರ್‌ಗಳನ್ನು ನೇಮಕಾತಿ ಮಾಡಿ ಸಕಾಲದಲ್ಲಿ ಚುನಾವಣೆಗಳನ್ನು ನಡೆಸಲು ಕ್ರಮವಿಡಲಾಗುತ್ತಿದೆ.<br><br>3) ಚುನಾವಣೆಗಳನ್ನು ಸುಸೂತ್ರವಾಗಿ ನಿಗಧಿತ ಅವಧಿಯೊಳಗೆ ನಡೆಸಲು ಸಹಕಾರ ಸಂಘಗಳ ನಿಯಮಗಳಲ್ಲಿ ಅವಕಾಶವಿದ್ದು, ಸದರಿ ನಿಯಮಗಳಂತೆ ಚುನಾವಣೆಯನ್ನು ಚುನಾವಣಾಧಿಕಾರಿಗಳ ಮುಖಾಂತರ ನಡೆಸಲು ಕ್ರಮವಿಡಲಾಗಿದೆ. |

**ಕಡತ ಸಂಖ್ಯೆ: ಸಿಒ 240 ಸಿಎಲ್‌ಎಸ್ 2026**

**(ಲಕ್ಷ್ಮಣ ಎಸ್.ಸವದಿ)**
**ಸಹಕಾರ ಸಚಿವರು**

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಟಿ ಡಿ ಶ್ರೀನಿವಾಸ್ (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:265 ಗೆ ಅನುಬಂಧ

ಡಿಸಿಸಿ ಬ್ಯಾಂಕ್ ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ 31.07.2026 ಕ್ಕೆ ರೈತರ ಬೆಳೆ ಸಾಲದ ಹೊರಬಾಕಿ

(ರೂ.ಕೋಟಿಗಳಲ್ಲಿ)

| ಕ್ರ.ಸಂ | ಜಿಲ್ಲೆಯ ಹೆಸರು | 31.07.2026 ಕ್ಕೆ ಹೊರಬಾಕಿ | |
|---|---|---|---|
| | | ಸಂಖ್ಯೆ | ಮೊತ್ತ |
| 1 | ಬೆಳಗಾವಿ | 496354 | 3783.31 |
| 2 | ವಿಜಯಪುರ | 251290 | 1966.77 |
| 3 | ಬಾಗಲಕೋಟೆ | 216588 | 1346.02 |
| 4 | ಧಾರವಾಡ | 28404 | 221.49 |
| 5 | ಗದಗ | 44550 | 249.83 |
| 6 | ಹಾವೇರಿ | 29759 | 213.85 |
| 7 | ಉತ್ತರ ಕನ್ನಡ | 90170 | 1078.15 |
| 8 | ಬೀದರ್ | 151911 | 821.52 |
| 9 | ಕಲಬುರಗಿ | 145666 | 702.00 |
| 10 | ಯಾದಗಿರಿ | 51205 | 220.99 |
| 11 | ರಾಯಚೂರು | 66218 | 478.83 |
| 12 | ಕೊಪ್ಪಳ | 38499 | 256.33 |
| 13 | ಬಳ್ಳಾರಿ | 41278 | 400.87 |
| 14 | ವಿಜಯನಗರ | 76051 | 682.39 |
| 15 | ಮೈಸೂರು | 96237 | 1009.29 |
| 16 | ಚಾಮರಾಜನಗರ | 38759 | 346.88 |
| 17 | ಮಂಡ್ಯ | 151468 | 1091.73 |
| 18 | ಹಾಸನ | 179426 | 1260.17 |
| 19 | ಚಿಕ್ಕಮಗಳೂರು | 52075 | 749.95 |
| 20 | ಕೊಡಗು | 30283 | 773.95 |
| 21 | ದಕ್ಷಿಣ ಕನ್ನಡ | 102383 | 1987.6 |
| 22 | ಉಡುಪಿ | 44348 | 664.99 |
| 23 | ಬೆಂಗಳೂರು ನ. | 10123 | 145.2 |
| 24 | ಬೆಂಗಳೂರು ಗ್ರಾ. | 31676 | 253.89 |
| 25 | ಬೆಂಗಳೂರು ದ. | 66516 | 487.06 |

| | | | |
|---|---|---|---|
| 26 | ಕೋಲಾರ | 18921 | 234.39 |
| 27 | ಚಿಕ್ಕಬಳ್ಳಾಪುರ | 32970 | 407.22 |
| 28 | ತುಮಕೂರು | 145086 | 738.23 |
| 29 | ಚಿತ್ರದುರ್ಗ | 64730 | 528.06 |
| 30 | ದಾವಣಗೆರೆ | 107214 | 921.55 |
| 31 | ಶಿವಮೊಗ್ಗ | 101011 | 1158.26 |
| | ಒಟ್ಟು | **3001169** | **25180.77** |

ಸಹಕಾರ ಸಂಘಗಳ ಅಪರ ನಿಬಂಧಕರು(ಪತ್ತು)

12/8/26